ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 54-60
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಚಿತ್ರದುರ್ಗ ಪಾಳೆಯಗಾರರ ಶಾಸನಗಳಲ್ಲಿ ಫಲಶೃತಿಗಳು: ಶಾಪಾಶಯ–ಪುಣ್ಯಾಶಯಗಳ ಅಸ್ಮಿತೆ

**ಡಾ.ರೇವಣಸಿದ್ದಪ್ಪ ಎಸ್**
ಸಹ ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ), ಚಿತ್ರದುರ್ಗ

***Abstract:***
*ವಿಜಯನಗರ ಸಾಮ್ರಾಟರ ನಿಷ್ಠಾವಂತನಾಗಿದ್ದ ಮತ್ತಿ ತಿಮ್ಮಣ್ಣನಾಯಕ ವಿಜಯನಗರ ಸಾಮ್ರಾಟರಿಂದ ಸಾಮಂತತ್ವವನ್ನು ಪಡೆದುಕೊಂಡು ಚಿತ್ರದುರ್ಗದಲ್ಲಿ ಒಂದು ಪಾಳೆಯ ಪಟ್ಟವನ್ನು ಸ್ಥಾಪಿಸಿದ್ದನು. ಚಿತ್ರದುರ್ಗ ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳನ್ನು ಹದಿನಾರನೆಯ ಶತಮಾನದ ಕ್ರಿ.ಶ. 1568 ರಿಂದ ಹದಿನೆಂಟನೆಯ ಶತಮಾನದ ದ್ವಿತಿಯಾರ್ಧದ ಮಧ್ಯಮಾವಧಿಯ ಕ್ರಿ.ಶ. 1779ರ ವರೆಗೆ ಇನ್ನೂರ ಹನ್ನೊಂದು ವರ್ಷಗಳ ಕಾಲ ಮತ್ತಿ ಮತ್ತು ಬಿಳಿಚೋಡು ಸಂತತಿಗಳ ಒಟ್ಟು ಹದಿನಾಲ್ಕು ಜನ ಪಾಳೆಯಗಾರರು ಅರಸರು ಆಳ್ವಿಕೆ ನಡೆಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಚಿತ್ರದುರ್ಗ ಪಾಳೆಯಗಾರರ ಶಾಸನಗಳಲ್ಲಿ ಶಾಪಾಶಯ–ಪುಣ್ಯಾಶಯಗಳ ಅಸ್ಮಿತೆಯನ್ನು ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ವಿಜಯನಗರ ಸಾಮ್ರಾಜ್ಯ, ಚಿತ್ರದುರ್ಗ ಪಾಳೆಯಗಾರರು, ತಿಮ್ಮಣ್ಣನಾಯಕ, ಶಾಸನಗಳು.*

## ಪೀಠಿಕೆ

ಚಿತ್ರದುರ್ಗ ಪಾಳೆಯಗಾರರು ವಾಲ್ಮೀಕಿ ಗೋತ್ರಕ್ಕೆ ಸೇರಿದ್ದು, ಕಾಮಗೇತಿ ವಂಶದವರು. ಚರಿತ್ರೆಯಲ್ಲಿ ಇವರು 'ಕಸ್ತೂರಿ' ಎಂಬ ಅಭಿದಾನದೊಂದಿಗೆ ಗುರುತಿಸಿ ಕೊಂಡಿದ್ದಾರೆ. ತಮ್ಮ ಶಾಸನಗಳಲ್ಲಿತಮ್ಮನ್ನು 'ಶ್ರೀಮನ್ಮಹಾನಾಯಕಾಚಾರ್ಯ' ಎಂಬ ಬಿರುದಿನಿಂದ ಗುರುತಿಸಿಕೊಂಡಿದ್ದಾರೆ. ಚಿತ್ರದುರ್ಗ ಪಾಳೆಯಗಾರರ ಶಾಸನಗಳಲ್ಲಿ ಫಲಶೃತಿಗಳು: ಶಾಪಾಶಯ–ಪುಣ್ಯಾಶಯಗಳ ಅಸ್ಮಿತೆ ಎಂಬ ಈ ಲೇಖನಕ್ಕೆ ಇವರ ಎಪ್ಪತ್ತು ಶಾಸನಗಳು ಪ್ರಮುಖ ಆಕರಗಳಾಗಿವೆ. ಕ್ರಿ.ಶ. 1556ರ ತಿಮ್ಮಣ್ಣನಾಯಕನ ಕಾಲದ ಹಿರಿಯೂರಿನ ಹಳೆವೂರು ಶಾಸನ ಇವರ ಮೊದಲ ಶಾಸನವಾಗಿದೆ. ಕ್ರಿ.ಶ. 1773ರ ರಾಜಾ ಮದಕರಿನಾಯಕನ ಕೂಡ್ಲೀ ಶೃಂಗೇರಿ ಸಂಸ್ಥಾನಕ್ಕೆ ಸಂಬಂಧಿಸಿದ ಕಾಗದದ ಪ್ರತಿ ಅವರ ಇತ್ತೀಚಿನ ಹಸ್ತಪ್ರತಿಯಾಗಿದೆ.[1]

ಚಿತ್ರದುರ್ಗ ಪಾಳೆಯಗಾರರ ಬಹುತೇಕ ಶಾಸನಗಳು ದಾನ ಶಾಸನಗಳಾಗಿವೆ. ದಾನ ಶಾಸನದ ವಿಶೇಷವೆಂದರೆ ದಾನಕ್ಕೆ ಒಳಪಡುವ ವಸ್ತುವಿನ ಮೇಲಿನ ಹಕ್ಕನ್ನು ಬಿಡುವ ಮತ್ತು ಪಡೆಯುವ ಪ್ರಕ್ರಿಯೆಯನ್ನು ಒಳಗೊಂಡಿರುತ್ತದೆ. ಅಂದರೆ, ದಾನಕೊಟ್ಟವನು ತಾನು ದಾನ ಕೊಡುವ ವಸ್ತುವಿನ ಮೇಲೆ ಅದೂವರೆಗೂ ತಾನು ಹೊಂದಿದ್ದ ಅಧಿಕಾರ ಅಥವಾ ಹಕ್ಕನ್ನು ಬಿಟ್ಟುಕೊಟ್ಟರೆ; ದಾನ ಪಡೆಯುವವನು ತಾನು ಪಡೆಯುತ್ತಿರುವ ದಾನದ ವಸ್ತುವಿನ ಮೇಲೆ ಹಕ್ಕನ್ನು ಪಡೆಯುತ್ತಾನೆ, ಈ ಪ್ರಕ್ರಿಯೆಯಲ್ಲಿ ಹಕ್ಕುಗಳ ವಿನಿಮಯ ನಡೆಯುತ್ತದೆ. ದಾನಶಾಸನಗಳಲ್ಲಿ ದಾನ ಸಂರಕ್ಷಣೆಯ ಉದ್ದೇಶದಿಂದ ಶಾಸನಾಂತ್ಯದಲ್ಲಿ ಶಾಪಾಶಯ ಮತ್ತು ಪುಣ್ಯಾಶಯಗಳನ್ನು ತಿಳಿಸಲಾಗಿರುತ್ತದೆ.

***Please cite this article as:*** ರೇವಣಸಿದ್ದಪ್ಪ, ಎಸ್. (2026). ಚಿತ್ರದುರ್ಗ ಪಾಳೆಯಗಾರರ ಶಾಸನಗಳಲ್ಲಿ ಫಲಶೃತಿಗಳು: ಶಾಪಾಶಯ–ಪುಣ್ಯಾಶಯಗಳ ಅಸ್ಮಿತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(1), 54–60

ಈ ಪಾಳೆಯಗಾರರ ಶಾಸನಗಳಲ್ಲಿ ಕೆಲವು ಫಲಶೃತಿಗಳನ್ನು ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ನೀಡಲಾಗಿದೆ. ಸಂಸ್ಕೃತ ಹಾಗೂ ತೆಲುಗು ಫಲಶೃತಿಗಳನ್ನು ಕನ್ನಡ ಲಿಪಿಯಲ್ಲಿ ಬರೆಯಲಾಗಿದೆ. ಕ್ರಿ.ಶ. 1583ರ ಮತ್ತಿ ತಿಮ್ಮಣ್ಣನಾಯಕನು ಕೊಟ್ಟ ದತ್ತಿಯ ಎರಡು ಶಾಸನಗಳು ತೆಲುಗು ಭಾಷೆ ಹಾಗೂ ಫಲಶೃತಿಗಳನ್ನು ಒಳಗೊಂಡಿದ್ದರೆ, ಇಲ್ಲಿಂದ ಮುಂದೆ ಸಂಸ್ಕೃತ ಭಾಷೆ ಮತ್ತು ಕನ್ನಡ ಲಿಪಿಯ ಫಲಶೃತಿಗಳಿರುವ ಒಟ್ಟು ಹದಿನೆಂಟು ಶಾಸನಗಳು ಕಂಡುಬರುತ್ತವೆ. ಕನ್ನಡ ಭಾಷೆ ಮತ್ತು ಕನ್ನಡ ಲಿಪಿಯ ಫಲಶೃತಿಗಳಿರುವ ಒಟ್ಟು ಹನ್ನೆರಡು ಶಾಸನಗಳು ಕಂಡುಬರುತ್ತವೆ. ಒಂದೇ ಶಾಸನದಲ್ಲಿ ಸಂಸ್ಕೃತ ಹಾಗೂ ಕನ್ನಡ ಫಲಶೃತಿಗಳಿರುವ ಒಟ್ಟು ಮೂರು ಶಾಸನಗಳು, ಸಂಸ್ಕೃತ ಹಾಗೂ ತೆಲುಗು ಫಲಶೃತಿಯಿರುವ ಒಂದೇ ಒಂದು ಶಾಸನ ಕಂಡುಬಂದಿದೆ. ಅಧ್ಯಯನಕ್ಕೆ ಬಳಸಿಕೊಂಡಿರುವ ಒಟ್ಟು ಎಪ್ಪತ್ತು ಶಾಸನಗಳಲ್ಲಿ ತೃಟಿತವಾಗಿರುವ ಶಾಸನಗಳನ್ನು ಹೊರತುಪಡಿಸಿ ತೆಲುಗು, ಸಂಸ್ಕೃತ ಮತ್ತು ಕನ್ನಡದ ಫಲಶೃತಿಗಳಿರುವ ಒಟ್ಟು ಇಪ್ಪತ್ತೆಂಟು ಶಾಸನಗಳನ್ನು ಗುರುತಿಸಲಾಗಿದೆ.[2] ಒಟ್ಟಾರೆ, ಇವರ ಶಾಸನಗಳಲ್ಲಿ ಹದಿನೈದು ರೀತಿಯ ಫಲಶೃತಿಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ, ಎರಡು ಪುಣ್ಯಾಶಯಗಳು, ಒಂದು ಅರಸನಿಗೆ ಕರ್ತವ್ಯ ಪಾಲನಾಶಯ, ಮತ್ತು ಹನ್ನೆರಡು ಶಾಪಾಶಯಗಳಿವೆ. ಇವರ ಶಾಸನಗಳಲ್ಲಿ ಕಂಡುಬಂದಿರುವ ಫಲಶೃತಿಗಳು ಮತ್ತು ಅವುಗಳ ವಿವರಗಳನ್ನು ಗಮನಿಸುವುದಾದರೆ,

**ಪುಣ್ಯಾಶಯಗಳು:**

1. **ಸ್ವದತ್ತಾಂ ದ್ವಿಗುಣಂ ಪುಣ್ಯಂ ಪರದತ್ತಾನುಂಪಾಲನಂಪರದತ್ತಾಪಹರೇಣ ಸ್ವದತ್ತಂ ನಿಷ್ಫಲಂ ಭವೇತ್**

ತಾನು ದಾನ ಕೊಟ್ಟಿದ್ದಕ್ಕೆ ಸಿಗುವ ಪುಣ್ಯಕ್ಕಿಂತಲೂ ಬೇರೆಯವರು ಕೊಟ್ಟ ದಾನವನ್ನು ಕಾಪಾಡಿಕೊಂಡು ಬರುವುದರಿಂದ ಸಿಗುವ ಪುಣ್ಯವು ಹೆಚ್ಚು ಎಂದು ತಿಳಿಸುವಲ್ಲಿ ದಾನ ನೀಡದೇ ಹೋದರೂ ಪರವಾಗಿಲ್ಲ ನೀಡಿರುವ ದಾನಕ್ಕೆ ಯಾವುದೇ ಚ್ಯುತಿಯನ್ನು ತಾರದೆ ಇದ್ದರೆ ಅಷ್ಟೇ ಸಾಕು ಎಂಬ ಅಭಿಪ್ರಾಯವು ಕಂಡುಬಂದಿರಬೇಕು. ಕೊಟ್ಟ ದಾನವನ್ನು ಕಾಪಾಡಿಕೊಂಡು ಬರುವ ಕರ್ತವ್ಯದಲ್ಲಿ ರಾಜರ ಪಾತ್ರವು ತುಂಬ ಮಹತ್ವದ್ದಾಗಿರುತ್ತದೆ. ಅವನು ಹಿಂದಿನ ರಾಜರ ಔದಾರ್ಯವನ್ನು ಎತ್ತಿ ಹಿಡಿಯುವ ಮನೋಭಾವದವನಾಗಿದ್ದರೆ ಅದನ್ನು ಕಾಪಾಡುವಲ್ಲಿ ನೆರವಾಗುತ್ತಾನೆ. ಇಲ್ಲದಿದ್ದರೆ, ಕೇವಲ ತನ್ನ ಹೆಸರು ಮಾತ್ರ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಲಿ ಎಂಬ ಸ್ವಾರ್ಥ ಮನೋಭಾವವನ್ನು ಹೊಂದಿದ್ದರೆ ಹಿಂದೆ ನೀಡಿದ್ದ ರಾಜರ ದಾನವನ್ನು ಅಳಿದು ತಾನು ನೀಡಿದ ದಾನವನ್ನು ಉಳಿಸುವ ಪ್ರಯತ್ನವನ್ನು ಮಾಡುವ ಸಂದರ್ಭಗಳು ಕಂಡುಬಂದಿರಬೇಕು. ಆದ್ದರಿಂದ ಇನ್ನೊಬ್ಬರ ದಾನವನ್ನು ನಾಶಮಾಡಿ ತಾನು ದಾನವನ್ನು ಕೊಟ್ಟು ಹೆಸರು, ಪುಣ್ಯವನ್ನು ಪಡೆಯುವುದಕ್ಕಿಂತ ಹಿಂದಿನ ದಾನವನ್ನು ಕಾಪಾಡುವುದರಿಂದ ಹೆಚ್ಚಿನ ಪುಣ್ಯ ಲಭಿಸುತ್ತದೆ. ಒಂದು ವೇಳೆ ದಾನವನ್ನು ನಾಶಪಡಿಸಿದರೆ ತಾನ್ನ ದಾನದ ಪುಣ್ಯವೂ ನಾಶವಾಗುತ್ತದೆ ಎಂಬುದು ಈ ಪುಣ್ಯಾಶಯದ ಆಶಯವಾಗಿರುತ್ತದೆ.

2. **ದಾನವಾಂ ಪಾಲನಯೋರ್ಮಧ್ಯೆ ದಾನಶ್ರೇಯೋನು ಪಾಲನುಂ ದಾನತ್ಸರ್ಗಮಾವಾಪ್ನೋತಿ ಪಾಲನಾದಚ್ಯುತಂ ಪದಂ.**

ಈ ಪುಣ್ಯಾಶಯದ ಮೂಲಕ ಶಾಸನಗಳಲ್ಲಿ ನೀಡಿದ ದಾನವನ್ನು ಕೆಡಿಸಿದರೆ ಅಥವಾ ಅಪಹರಿಸಿದರೆ ಒದಗುವ ಪಾಪವನ್ನು ಮನವರಿಕೆ ಮಾಡಿಕೊಡುವುದರ ಮೂಲಕ ದಾನವನ್ನು ರಕ್ಷಿಸುವಂತೆ ಆಗ್ರಹಪೂರ್ವಕವಾಗಿ ಬೇಡಿಕೊಳ್ಳುವ ಸಂದರ್ಭವಿದ್ದುದನ್ನು ತಿಳಿಯಬಹುದು. ದಾನ ಮಾಡುವುದರಿಂದ ಸ್ವರ್ಗವು ಲಭಿಸಿದರೆ ದಾನದ ಪಾಲನೆ ಅಥವಾ ರಕ್ಷಣೆಯಿಂದ ಅಚ್ಯುತ ಪದವಿಯು ದೊರೆಯುತ್ತದೆ ಎಂಬ ಅಂಶಗಳನ್ನು ಸೇರಿಸುತ್ತಾ

ದಾನವನ್ನು ಕಾಪಾಡುವ ಪ್ರಯತ್ನವನ್ನು ಮಾಡುವ ಆಶಯವನ್ನು ಈ ಪುಣ್ಯಾಶಯದಲ್ಲಿ ಕಾಣಬಹುದು.

**ಶಾಪಾಶಯಗಳು:**

1. **ಸ್ವದತ್ತಾ ಪುತ್ರಿಕಾದಾತ್ರೀ ಪಿತ್ರುದತ್ತಾ ಸಹೋದ್ರೋ ಅನ್ಯದತ್ತಾ ಮಾತ್ತಾಚದತ್ತಾ ಭೂಮಿಪರ್ರಿತ್ಯಜೋತ್ತು.**

ಈ ಶಾಪಾಶಯದಲ್ಲಿ ಇರುವ ಅಶ್ಲೀಲತೆಯನ್ನು ಗಮನಿಸಿದರೆ, ದಾನದ ಅಪಹರಣವು ಕ್ರಮೇಣ ಹೆಚ್ಚಾಗಿರಬೇಕು, ಆದ್ದರಿಂದ ಶಾಸನಗಳಲ್ಲಿ ಅಶ್ಲೀಲ ಪದಪ್ರಯೋಗ ಮಾಡಿರುವುದನ್ನು ಕಾಣಬಹುದು. ಈ ಶಾಪಾಶಯದ ಮೂಲಕ ಅನೈತಿಕ ಸಂಬಂಧಗಳನ್ನು ಅಪಾದಿಸಿ, ಬೈಗುಳ ಅಥವಾ ಅಶ್ಲೀಲ ಪದಗಳನ್ನು ಬಳಸಿ ದಾನವನ್ನು ಅಪಹರಿಸುವವರನ್ನು ಮಾನಸಿಕವಾಗಿ ನಿಯಂತ್ರಿಸಿ ತಾನು ನೀಡಿರುವ ದಾನವನ್ನು ರಕ್ಷಿಸಿಕೊಳ್ಳುವ ಪ್ರಯತ್ನ ಈ ಶಾಪಾಶಯದಲ್ಲಿದೆ. ಈ ಶಾಸನದ ಹಿನ್ನೆಲೆಯಲ್ಲಿ ಗಮನಿಸಿದಾಗ, ದಾನ ಅಪಹರಿಸಿದವನು ತನ್ನ ತಂದೆಯನ್ನು ಕೊಂದು ತಾಯಿಯೊಂದಿಗೆ ಕೂಡಿದವನೆಂದು, ಒಡಹುಟ್ಟಿದವಳೊಂದಿಗೆ ಸಂಬಂಧವಿರಿಸಿಕೊಂಡಂತೆಯೂ, ತನ್ನ ಮಗಳೊಂದಿಗೆ ಲೈಂಗಿಕ ಸಂಬಂಧವನ್ನು ಮಾಡಿದಂತೆಯೂ ಎಂದು ಹೇಳಿರಬಹುದಾದ ಸಂದರ್ಭವನ್ನು ಗಮನಿಸಿದರೆ, ಇವೆಲ್ಲವೂ ಪಾಪ ಕೃತ್ಯಗಳೇ ಆಗಿದ್ದು ಇವುಗಳಿಂದ ದೊರೆಯುವ ಪಾಪದ ಫಲ ಅವನು ಈ ಭೂಮಿಯ ಮೇಲೆ ಜೀವಿಸಿರುವವರೆಗೂ ಕಾಡಲಿ ಎಂಬ ಶಾಪವನ್ನು ನೀಡಲಾಗಿದೆ.[3] ಈ ಶಾಪಾಶಯದಲ್ಲಿ ಪ್ರಸ್ತಾಪಿಸಿರುವ ಪದಪ್ರಯೋಗಗಳು ಕೇಳಲು ಅಸಹ್ಯ ಹುಟ್ಟಿಸುವ ಪಾಪಕ್ರಿಯೆಗಳ ಪ್ರಸ್ತಾಪಗಳಾಗಿವೆ.[4]

2. **ಇದಕೆ ಅಳುಪಿದವನು ತಮ್ಮ ತಾಯಿ ತಂದೆಯನು ವಾರಣಾಸಿಯಲಿ ಕೊರಳ ಕೋಯ್ದ ಪಾತಕಕೆ ಹೋಗುವನು.**

ಹಿಂದೂ ಧರ್ಮದಲ್ಲಿ ಒಂದೊಂದು ಪಂಥದವರಿಗೂ ಒಂದೊಂದು ಪವಿತ್ರ ಆರಾಧನಾ ಕೇಂದ್ರಗಳಿವೆ. ಅದೇ ರೀತಿ ಇಲ್ಲಿ ಬಳಕೆಯಾಗಿರುವ ವಾರಣಾಸಿ ಒಂದು ಪವಿತ್ರತೆಯ ಸಂಕೇತವಾಗಿದೆ. ಪುಣ್ಯಕ್ಷೇತ್ರವಾದ ವಾರಣಾಸಿಯಲ್ಲಿ ಜನ್ಮ ನೀಡಿದ ತಂದೆ ತಾಯಿಯರನ್ನು ಕೊಂದರೆ ಯಾವ ಪಾಪ ಸಿಗುವುದೋ ಅದೇ ಪಾಪಕ್ಕೆ ಶಾಸನವನ್ನು ನಾಶಪಡಿಸಿದವನಿಗೆ ದೊರೆಯುತ್ತದೆ ಎಂಬುದನ್ನು ತಿಳಿಸುವ ಪ್ರಯತ್ನವನ್ನು ಈ ಶಾಸನದಲ್ಲಿ ಕಾಣಬಹುದು.

3. **ಸರ್ವಮಾನ್ಯ ಕೆಲಸಕೆ ಅಲ್ಲದೆ ಅತ್ರುಕರದವರ ಬಾಯಲ್ಲಿ .....ಕಲುಂಪು ಅವರ ಚಿಪ್ಪೆ ನೀರು ಕುಡಿಸಿದಹಾಂಗೆ.**

ಕೊಟ್ಟಂತ ದಾನವನ್ನು ಸರ್ವರ ಉಪಯೋಗಕ್ಕಲ್ಲದೇ ಬೇರೆ ಉದ್ದೇಶ ಅಥವಾ ವೈಯಕ್ತಿಕವಾಗಿ ಬಳಸಿಕೊಂಡರೆ ಅವರ ಬಾಯಲ್ಲಿ ಕತ್ತೆ ತುಂ..(ಮರ್ಮಾಂಗ) ಕಲ್ಲುಪ್ಪು ಮತ್ತು ಅವರ ಉಚ್ಚೆನೀರು ಕುಡಿದಂತೆ ಎಂಬ ಅಸಹ್ಯ ವರ್ಣನೆಯ ಅಶ್ಲೀಲ ಪದ ಪ್ರಯೋಗವಾಗಿರುವುದನ್ನು ಗಮನಿಸಿದರೆ ಓದಿದವರಿಗೆ ಭೀಭತ್ಸವನ್ನು ಹುಟ್ಟಿಸುವಂತಿದೆ.

4. **ಇದಕೆ ಅಳುಪಿದವನು ಕತ್ತೆಯ ತುಂ..ಯ(ಮರ್ಮಾಂಗ)ನು ಕಲ್ಲುಪ್ಪನು ತಿಂದ ನಾಯಿದರ ಕಸಿಗೆ ಆಸೆ ಮಾಡಿದವ ನಾಯಿದರ ಹೊಟ್ಟೆಯಲಿ ಹುಟ್ಟಿದವ.**

ನಾಯಿ ಮತ್ತು ಕತ್ತೆ ಮನುಷ್ಯನಿಗೆ ಸಹಾಯಕ ಪ್ರಾಣಿಗಳು ಆದರೆ ಅವುಗಳ ಮಾಂಸವನ್ನು ತಿನ್ನುವುದು ಅತ್ಯಂತ ಅಸಹ್ಯವೆಂಬ ಭಾವನೆ ಹಿಂದೂ ಸಂಪ್ರದಾಯದಲ್ಲಿದೆ. ಈ ಶಾಪಾಶಯದಲ್ಲಿ ದಾನ ನಾಶಮಾಡುವವನನ್ನು ಮಾನಸಿಕವಾಗಿ ಹಿಡಿದಿಡುವ ಪ್ರಯತ್ನವನ್ನು ಮಾಡಲಾಗಿದೆ.[5] ಸಾಮಾನ್ಯವಾಗಿ ಪ್ರಾಣಿಯ ಬಗ್ಗೆ ಮಾತನಾಡುವಾಗ ಅದರ ಮರ್ಮಾಂಗ ಮತ್ತು ಅವು ವರ್ಜಿಸುವ ವಿಷ್ಟಿ (ಮಲ)ದ ಬಗ್ಗೆ ಮಾತನಾಡುವುದಿಲ್ಲ ಅದು ಅಸಹ್ಯ. ಇಲ್ಲಿ ನಾಯಿಯ ಮರ್ಮಾಂಗವನ್ನು ಮತ್ತು ಕಲ್ಲುಪ್ಪನ್ನು ಬೆರೆಸಿ ತಿಂದಂತೆ ಎಂದು ಹೇಳುವುದಷ್ಟೇ ಅಲ್ಲದೇ ನಾಯಿಯ ಕಸಿಯನ್ನು ತಿನ್ನಲು ಆಸೆ

ಪಡುವವನು ಹಾಗೂ ನಾಯಿಯ ಹೊಟ್ಟೆಯಲಿ ಜನಿಸಿ ಮುಂದಿನ ಜನ್ಮದಲ್ಲಿ ನಾಯಿಯಾಗಿ ಜನ್ಮ ತಾಳುತ್ತಾನೆ ಎಂದು ಶಪಿಸಿರುವುದನ್ನು ಈ ಶಾಪಾಶಯದಲ್ಲಿ ಕಾಣಬಹುದು.

5. **ಯಿದಕೆ ತಪಿದವರು ತಮ್ಮ ತಾಯಿಗೆ ತಪಿದ ಹಾಗೆ... ಪುರವರ್ಗ.**

ಈ ಶಾಪಾಶಯದಲ್ಲಿ ಪುರವರ್ಗ ಅಂದರೆ ಗೌಡರಾಗಲೀ ಶಾನಭೋಗರಾಗಲೀ ನಾಡಿನಲ್ಲಿ ನಡೆಯುವ ಯಾವುದೇ ಸಾಮಾಜಿಕ ಪುಣ್ಯಕಾರ್ಯಗಳಿಗೆ ಸಹಕಾರ ಮತ್ತು ರಕ್ಷಣೆ ಒದಗಿಸುವ ಜವಾಬ್ದಾರಿ ಹೊಂದಿರುತ್ತಾರೆ. ಯಾರಾದರೂ ಸಮಾಜದ ಹಿತಕ್ಕಾಗಿ ನೀಡಿರುವ ದಾನವನ್ನು ಅಪಹರಿಸುತ್ತಿದ್ದರೆ ನೋಡಿಯೂ ನೋಡದಂತಿದ್ದು ಅವುಗಳು ಹಾಳಾಗಲು ಕಾರಣರಾದರೆ ಅವರೂ ಸಹಾ ತಮ್ಮ ತಾಯಿಗೆ ತಪ್ಪಿದಂತೆ ಅಂದರೆ ತಮ್ಮ ತಾಯಿಯೊಂದಿಗೆ ಅನೈತಿಕ ಸಂಬಂಧವನ್ನು ಹೊಂದಿದ ಪಾಪಕ್ಕೆ ಗುರಿಯಾಗುತ್ತಾರೆ ಎಂಬ ಅಂಶ ಈ ಶಾಪಾಶಯದಲ್ಲಿದೆ. ತಾಯಿಯೊಂದಿಗೆ ಸಂಬಂಧವನ್ನು ಇಟ್ಟುಕೊಂಡಂತಹ ಅಂಶವನ್ನು ಸಾರುವ 'ತಾಯ್ಗಂಡ' ಎಂಬ ಬೈಗುಳ ಈಗಲೂ ಜನಪದರಲ್ಲಿ ಚಾಲ್ತಿಯಲ್ಲಿದೆ.

6. **ಯಿ ಧರ್ಮಕೆ ಯಾರು ಅಳುಪಿದರೂ ಅನೇಕ ಪಾತಕಕ್ಕೆ ಹೊಗೊರು ಸರ್ವಮಾನ್ಯ ಪಾಲನೆ.**

ದಾನಿಯಾಗಲಿ ದಾನ ಪಡೆದವರಾಗಲಿ ಅಥವಾ ಜನರಾಗಲಿ ದಾನವನ್ನು ಅಪಹರಿಸಿದರೆ, ಇಲ್ಲವೇ ನಾಶಪಡಿಸಿದರೆ ಅನೇಕ ಪಾತಕಗಳಿಗೆ ಅಂದರೆ ಪಂಚಮಹಾಪಾತಕಗಳಿಗೆ ಗುರಿಯಾಗುತ್ತಾರೆ. ವೇದಗಳ ಪ್ರಕಾರ ಪಂಚಮಹಾಪಾತಕಗಳೆಂದರೆ: ಗೋಹತ್ಯೆ, ಗುರು–ಹಿರಿಯರ ಹತ್ಯೆ, ಶಿಶುಹತ್ಯೆ, ಸ್ತ್ರೀಹತ್ಯೆ ಮತ್ತು ಬ್ರಾಹ್ಮಣಹತ್ಯೆ. ಇವುಗಳಲ್ಲಿ ಯಾವ ಒಂದನ್ನು ಮಾಡಿದರೂ ಆ ಪಾಪವು ಅತ್ಯಂತ ಘೋರವಾದುದು[6] ಎಂಬುದು ಈ ಶಾಪಾಶಯದಲ್ಲಿನ ಆಶಯವಾಗಿದೆ.

7. **ಈ ಧರ್ಮಕ್ಕೆ ಆವನೊಬ್ಬ ಅಳಿಪಿದವರಿಗೆ ಧರ್ಮಾಪಹಾರದ ಪಾತಕ.... ವಾಚದತ್ತಂ ಮನೋದತ್ತಂ ಧಾರಾದತ್ತಂ ದಿನಂದಿನಂ ಶಷ್ಠಿವರುಷ ಸಹಸ್ರಾಣಿ ವಿಷ್ಠಾಯಾಂ ಜಾಯಾತೇ ಕ್ರಿಮಿಃ.**

ಈ ಶಾಪಾಶಯ ಪುನರ್ಜನ್ಮದ ನಂಬಿಕೆಯನ್ನಾಧರಿಸಿ ನೀಡಿದುದಾಗಿದೆ. ಅಂದರೆ ಮನುಷ್ಯನು ಇಹದಲ್ಲಿ ಮಾಡುವ ಕರ್ಮಗಳನ್ನಾಧರಿಸಿ ಅವನ ಮುಂದಿನ ಜನ್ಮ ನಿರ್ಧಾರವಾಗುತ್ತದೆಂಬುದು ಆಯಾ ಧರ್ಮಗಳಲ್ಲಿ ಕಂಡುಬರುವ ಸಾಮಾನ್ಯವಾದ ನಂಬಿಕೆ. ಇದನ್ನು ತಿಳಿಸುವುದರ ಮೂಲಕ ದಾನ ನಾಶಪಡಿಸುವವರನ್ನು ಮಾನಸಿಕವಾಗಿ ಪಾಪ ಕಾರ್ಯಗಳಿಗೆ ಕೈಹಾಕದಂತೆ ತಡೆಯುವ ಪ್ರಯತ್ನವು ಈ ಶಾಪಾಶಯದಲ್ಲಿ ಕಂಡುಬಂದಿದೆ. ಅಂದರೆ, ಇಲ್ಲಿ ಮಾಡುವ ಪಾಪ ಕೃತ್ಯಗಳಿಗೆ ಒದಗುವ ಕ್ರಿಮಿ, ಕೀಟಗಳ ಜನ್ಮವು ಅತ್ಯಂತ ನಿಕೃಷ್ಟ ಮತ್ತು ಹೇಯವಾದುದು. ಎಲ್ಲಾ ಜನ್ಮಗಳಲ್ಲಿಯೂ ಮನುಷ್ಯ ಜನ್ಮವೇ ಶ್ರೇಷ್ಠ ಜನ್ಮ. 'ಶಷ್ಠಿವರುಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮೀಃ' ಅಂದರೆ ದಾನವನ್ನು ಅಪಹರಿಸಿದವನು ಸಹಸ್ರ ವರ್ಷಗಳ ಕಾಲ ಮಲದೊಳಗಿನ ಕ್ರಿಮಿಯಾಗಿ ಜನಿಸುವನು: ಅದಕ್ಕಿಂತ ಹೇಯವಾದ ಜನ್ಮ ಬೇರೊಂದಿಲ್ಲವೆಂದು ಈ ಶಾಪಾಯದ ಆಶಯವಾಗಿದೆ.

8. **ಯಿ ಧರ್ಮಕೆ ತಪ್ಪಿದವರು ಕಾಡಿಗೆ ತಪ್ಪಿದ ಹಾಗೆ...ಶ್ರೀ.**

ಯಾವ ಒಬ್ಬ ವ್ಯಕ್ತಿಯು ದಾನ ಧರ್ಮಕ್ಕೆ ತಪ್ಪಿದರೆ ಅವನು ನಾಡನ್ನು ತೊರೆದು ಕಾಡಿನಲ್ಲಿ ವಾಸಿಸುವ ಪ್ರಾಣಿಯಂತೆ ಜೀವನವನ್ನು ನಡೆಸಿದಂತೆ ಎಂಬುದು ಈ ಶಾಪಾಶಯದ ಆಶಯವಾಗಿದೆ. ಬಹುಶಃ ಕಾಡಿನಲ್ಲಿ ಬ್ರಹ್ಮರಾಕ್ಷಸನಾಗಿ ಆಲದ ಮರದಲ್ಲಿ ಇರುವುದು. ಗಜಜನ್ಮವನ್ನು ಪಡೆಯುವುದು. ಮೊಸಳೆಯಾಗುವುದು.[7] ಮತ್ತಿಯ ಮರವಾಗು, ಶಿಲೆಯಾಗು, ನದಿಯಾಗು, ಓತಿಯ ರೂಪವನ್ನು ಪಡೆ ಮೊದಲಾದ ಕೀಳು ಜನ್ಮಗಳನ್ನು ಪಡೆಯುವ

ಶಾಪಗಳನ್ನು ನೀಡಲಾಗಿರುವುದನ್ನು ಈ ಶಾಪಾಶಯ ತಿಳಿಸುತ್ತದೆ.

9. **ಯಿದಕೆ ಬೇಡರು ತಪಿದರೆ ತಮ್ಮ ಗುರುಜನಕೆ ತಪಿದ ಹಾಗೆ ಗುರುಸ್ತರು ತಪಿದರೆ ಗುರುಲಿಂಗಜಂಗಮಕೆ ತಪಿದ ಹಾಗೆ ಕ್ಷತ್ರಿಯರು ತಪಿದರೆ ಬ್ರಂಹರವಧೆ ಮಾಡಿದ ಹಾಗೆ ತುರುಕರು ತಪಿದರೆ ಮಕೇಲಿ ಹಂದಿತಿಂದ ಹಾಗೆ ಬ್ರಹ್ಮರು ತಪಿದರೆ ಕಾಶಿಲಿ ಗೋಹತ್ಯೆ ಮಾಡಿದ ಹಾಗೆ.**

ಈ ಶಾಪಾಶಯದಲ್ಲಿ ಅಂದಿನ ಸಮಾಜದ ಹಲವು ವರ್ಗಗಳನ್ನು ಒಟ್ಟಾಗಿಸಿಕೊಂಡು ಶಾಪಾಶಯವನ್ನು ಬಳಸಿಕೊಳ್ಳಲಾಗಿದೆ. ಆಯಾ ವರ್ಗದವರಿಗೆ ಪ್ರಧಾನವಾಗಿರುವ ಅಥವಾ ಪವಿತ್ರವಾಗಿರುವ ಪ್ರಮುಖರು ಹಾಗೂ ಸ್ಥಳಗಳನ್ನು ಅನ್ವಯಿಸಿಕೊಂಡು ಶಾಪವನ್ನು ಸೂಚಿಸಲಾಗಿದೆ. ಬೇಡರಿಗೆ ಅವರ ಗುಡಿಕಟ್ಟಿನ ಪ್ರಮುಖರು ಶ್ರೇಷ್ಠ ಅವರನ್ನು ಅವಮಾನಿಸುವುದು ಅವರ ಬುಡಕಟ್ಟು ಧರ್ಮಕ್ಕೆ ನಿಷಿದ್ಧ, ಇಲ್ಲಿ ಅವರ ರಾಜಗುರುವನ್ನು ಆಧಾರವಾಗಿಸಿಕೊಳ್ಳಲಾಗಿದೆ. ಚಿತ್ರದುರ್ಗ ಪಾಳೆಯಗಾರರು ಲಿಂಗಾಯತ ಧರ್ಮದ ಪಕ್ಷಪಾತಿಗಳಾಗಿದ್ದರು ಎಂಬುದಕ್ಕೆ ಇವರ ರಾಜಪೋಷಣೆಯಲ್ಲಿ ಬೆಳೆದ ಮುರುಘಾಮಠವೇ ಸಾಕ್ಷಿ. ಒಂದು ವೇಳೆ ಗುರುಗಳು ತಮ್ಮ ದಾನವನ್ನು ನಾಶಪಡಿಸಿದರೆ, ಗುರುಲಿಂಗಜಂಗಮರಿಗೆ ದ್ರೋಹಮಾಡಿದಂತೆ. ಏಕೆಂದರೆ, ಗುರು–ಲಿಂಗ–ಜಂಗಮ ಲಿಂಗಾಯತ ಧರ್ಮದ ಜೀವಾಳ. ಇಲ್ಲಿ ಜಂಗಮ–ಬ್ರಾಹ್ಮಣ ಹತ್ಯೆಯ ಪಾಪವನ್ನು ಒಟ್ಟಿಗೇ ಪ್ರಸ್ತಾಪಿಸಿರುವುದನ್ನು ಗಮನಿಸಿದರೆ, ಈ ಪಾಳೆಯಗಾರರ ಆಡಳಿತದಲ್ಲಿ ಲಿಂಗಾಯತ ಧರ್ಮ ಪ್ರಾಮುಖ್ಯತೆ ಹೊಂದಿತ್ತು ಮತ್ತು ಜಂಗಮನಿಗೆ ಸಮಾಜದಲ್ಲಿ ಉತ್ತಮ ಗೌರವಸ್ಥಾನವಿತ್ತು ಎಂದು ತಿಳಿಯುತ್ತದೆ. ಆದ್ದರಿಂದ ದಾನವನ್ನು ರಕ್ಷಿಸದೇ ಅಪಹರಿಸಿದವನು ಜಂಗಮರನ್ನು ಕೊಂದ ಪಾಪಕ್ಕೆ ಹೋಗುವವನೆಂಬ ಹೆದರಿಕೆಯ ಅಂಶವನ್ನು ಸೇರಿಸಿದ್ದಾರೆ. ಕ್ಷತ್ರಿಯರು ಅಂದರೆ ಒಂದುವೇಳೆ ರಾಜನು ದಾನ ರಕ್ಷಣೆಗೆ ತಪ್ಪಿದರೆ, ಅವನು ಬ್ರಾಹ್ಮಣರನ್ನು ಕೊಂದ ಪಾಪಕ್ಕೆ ಹೋಗುತ್ತಾನೆ. ಅದು ಪಂಚಮಹಾಪಾತಕಗಳಲ್ಲಿ ಒಂದು, ಅವನಿಗೆ ಸ್ವರ್ಗ ಬದಲು ನರಕ ಪ್ರಾಪ್ತಿಯಾಗುವುದು.

ತುರುಕರು ಅಥವಾ ಮುಸ್ಲೀಮರು ದಾನವನ್ನು ರಕ್ಷಿಸದೇ ಅಪಹರಿಸಿದರೆ, ಅವರು ತಮ್ಮ ಪವಿತ್ರ ಧರ್ಮ ಕ್ಷೇತ್ರವಾದ ಮೆಕ್ಕಾದಲ್ಲಿ ಹಂದಿಯನ್ನು ತಿಂದ ಹಾಗೆ. ಈ ರೀತಿಯ ಶಾಪ ಮುಸ್ಲೀಮರ ಕುರಿತು ಹುಟ್ಟಿಕೊಳ್ಳಲು ಕಾರಣ ಹಿಂದೂ ಸಂಪ್ರದಾಯ ಹಲವಾರು ಪವಿತ್ರ ಕ್ಷೇತ್ರಗಳಾಗಲೀ ಅಥವಾ ಪವಿತ್ರ ಪ್ರಾಣಿಗಳಾಗಲೀ ಇಸ್ಲಾಂ ಧರ್ಮಕ್ಕೆ ಪವಿತ್ರವಲ್ಲವಾದುದರಿಂದ ಅವು ಮುಸ್ಲೀಮರಿಗೆ ಯಾವುದೇ ರೀತಿಯ ಪ್ರಭಾವವನ್ನು ಬೀರುತ್ತಿರಲಿಲ್ಲ. ಏಕೆಂದರೆ, ಗೋವು ಹಿಂದೂಗಳಿಗೆ ಪವಿತ್ರ ಆದರೆ ಅವುಗಳ ಭಕ್ಷಣೆ ಮಾಡುವುದು ಮುಸ್ಲೀಮರಿಗೆ ಪಾಪಕರವಲ್ಲ; ಅದು ಅವರ ಆಹಾರ ಪದ್ಧತಿಯ ಒಂದು ಭಾಗವಾಗಿದೆ. ಗೋಹತ್ಯೆಯ ದೋಷದ ಭಯವಿಲ್ಲದ ಇಸ್ಲಾಂ ಧರ್ಮದವರು ದಾನವನ್ನು ಅಪಹರಣ ಮಾಡುವುದರಲ್ಲಿ ತೊಡಗಿರಬಹುದು, ಆದ್ದರಿಂದ, ಇಸ್ಲಾಂ ನಿಷಿದ್ಧ ಪ್ರಾಣಿಯಾದ ಹಂದಿ ಮಾಂಸವನ್ನು ಅವರ ಪವಿತ್ರ ಕ್ಷೇತ್ರವಾದ ಮೆಕ್ಕಾ ಮದೀನದಲ್ಲಿ ಭಕ್ಷಿಸಿದ ದೋಷಕ್ಕೆ ಒಳಗಾಗುತ್ತಾರೆ ಎಂದು ಅವರನ್ನು ಮಾನಸಿಕವಾಗಿ ನಿಯಂತ್ರಿಸಲು ಈ ಶಾಪವನ್ನು ಬಳಸಿಕೊಂಡಿದ್ದಾರೆ.

ಒಂದು ವೇಳೆ ಬ್ರಾಹ್ಮಣ ದಾನವನ್ನು ಅಪಹರಿಸಿದರೆ, ಅವನು ಪವಿತ್ರ ಕ್ಷೇತ್ರ ಕಾಶಿಯಲ್ಲಿ ಹಿಂದೂ ಧರ್ಮಕ್ಕೆ ಅಥವಾ ಬ್ರಾಹ್ಮಣರಿಗೆ ಪವಿತ್ರ ಪ್ರಾಣಿಯಾದ ಗೋವನ್ನು ಹತ್ಯೆ ಮಾಡಿದ ಪಾಪಕ್ಕೆ ಹೋಗುವವರು ಎಂಬ ಶಾಪವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಒಟ್ಟಾರೆ ಈ ಶಾಪಾಶಯವನ್ನು ಗಮನಿಸಿದರೆ ಅಂದಿನ ಸಮಾಜದ ಎಲ್ಲಾ ಪ್ರಮುಖ ವರ್ಗದವರನ್ನು ಒಟ್ಟಾಗಿಸಿ ಅವರೆಲ್ಲರನ್ನೂ ಶಾಸನದ ಅಥವಾ ದಾನದ ರಕ್ಷಣೆಗಾಗಿ ಮಾನಸಿಕವಾಗಿ ಎಚ್ಚರಿಸುವ ಹಾಗೂ ದಾನವನ್ನು ಅಪಹರಿಸದಂತೆ

ಮಾನಸಿಕವಾಗಿ ಹಿಡಿದಿಡುವ ಪ್ರಯತ್ನವನ್ನು ಮಾಡಿರುವುದು ಕಂಡುಬರುತ್ತದೆ.

**10. ಯಿದಕೆ ಆವನೊಬ್ಬ ತಪಿದರೂ ಯರಡು ಸಮಯ ಶಿವಾಚಾರ ಕುಲಾಚಾರ ಹೊರಗು ಆವನು ತಪಿದರೂ ತಂಮ ಧರ್ಮಕ್ಕೆ ಹೊರಗು.**

ಈ ಶಾಪಾಶಯದಲ್ಲಿ ಕಂಡುಬಂದಿರುವ ಸಮಯ (ಧರ್ಮ), ಶಿವಾಚಾರ ಮತ್ತು ಕುಲಾಚಾರ ಎಂಬ ಪದಗಳನ್ನು ಗಮನಿಸಿದರೆ ಇದು ಲಿಂಗಾಯತ ಧರ್ಮದ ಹಿನ್ನೆಲೆಯಲ್ಲಿ ನೀಡಿರುವ ಶಾಪದಂತೆ ಕಂಡುಬರುತ್ತದೆ. ಇದರ ಪ್ರಕಾರ ಲಿಂಗಾಯತ ಧರ್ಮ ಪ್ರಾಬಲ್ಯವಾಗುತ್ತಿದ್ದ ಕಾಲದಲ್ಲಿ ಈ ಧರ್ಮೀಯರಿಗೆ ಈ ಧರ್ಮದ ಆಚಾರ–ವಿಚಾರ ಮತ್ತು ಸಂಪ್ರದಾಯಗಳನ್ನು ಪಾಲಿಸುವುದು ಕಟ್ಟುನಿಟ್ಟಾಗಿತ್ತು. ಬೇರೊಂದು ಧರ್ಮದಿಂದ ವಿಭಿನ್ನ ಕಾಯಕದ ವಿಭಿನ್ನ ಧರ್ಮೀಯರು ಬಂದು ಈ ಧರ್ಮಕ್ಕೆ ಸೇರುತ್ತಿದ್ದರಿಂದ ಈ ಧರ್ಮಕ್ಕಾಗಲೀ ಅಥವಾ ಈ ಧರ್ಮದ ಆಚಾರ–ವಿಚಾರಗಳಿಗಾಲೀ ಒಗ್ಗಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಹಾಗೆ ಬೇರೊಂದು ಧರ್ಮದಿಂದ ಬಂದವರು ಈ ಧರ್ಮದ ಸಮಯ, ಶಿವಾಚಾರ ಮತ್ತು ಕುಲಾಚಾರಗಳಿಗೆ ಅಪಚಾರ ಮತ್ತು ದಾನದ ಅಪಹರಣಗಳಂತಹ ದ್ರೋಹವನ್ನು ಮಾಡಿದರೆ ಅವರು ಕುಲದ್ರೋಹಿಗಳು ಎಂದೂ, ಕುಲದಿಂದ ಹೊರಗೂ ಎಂದೂ ಪರಿಗಣಿಸಲ್ಪಡಲಾಗುತ್ತಿತ್ತು.[8] ಅಂತವರು ಧರ್ಮಕ್ಕೆ ಹೊರಾಗಾಗುವುದಲ್ಲದೇ ಅತ್ಯಂತ ಕೀಳು ಕುಲಕ್ಕೆ ಸೇರಿದವರಾಗುತ್ತಾರೆ ಎಂದು ಈ ಶಾಪಾಶಯದಲ್ಲಿ ಈ ಮೇಲಿನೆಲ್ಲಾ ಅಂಶಗಳನ್ನು ಒಳಗು ಮಾಡಿಕೊಂಡು ಶಾಪವನ್ನು ನೀಡಲಾಗಿದೆ.

**11. ಯಿ ಧರ್ಮಕೆ ಯಾರ್ರು ಅಳುಬಂದಾರ್ರೋ ತಂಮತಂದೆತ್ತಾಯ ಸಹಾ ಕೊಂದ ಪಾತಕಕೆ ಹೋಗುವರ್ರು.**

ಯಾವುದೇ ಸಮಾಜವಾಗಿರಲ್ಲಿ ಅಲ್ಲಿ ತಂದೆ ತಾಯಿಗೆ ಅತ್ಯಂತ ಪೂಜ್ಯನೀಯವಾದ ಸ್ಥಾನವಿರುತ್ತದೆ. ಜನ್ಮ ನೀಡಿದ ತಂದೆ ತಾಯಿಯನ್ನು ಹತ್ಯೆ ಮಾಡುವುದನ್ನು ಯಾವ ಸಮಾಜವೂ ಒಪ್ಪುವುದಿಲ್ಲ, ಅದನ್ನು ಪಾಪದ ಕಾರ್ಯವೆಂದು ಪರಿಗಣಿಸುತ್ತದೆ.[9] ಆದ್ದರಿಂದ ದಾನವನ್ನು ನಾಶಮಾಡಿದ ಅಥವಾ ಅಪಹರಿಸಿದವರು ತಾವೇ ಸ್ವತಃ ತಂದೆ ತಾಯಿಯನ್ನು ಕೊಂದ ಪಾಪಕ್ಕೆ ಗುರಿಯಾಗುವರು ಎಂದು ಈ ಶಾಪಾಶಯದ ಮೂಲಕ ಅಂದಿನ ಕಾಲದ ದಾನದ ಅಪಹರಣಕಾರರನ್ನು ಮಾನಸಿಕವಾಗಿ ಹಿಡಿದಿಡುವ ಪ್ರಯತ್ನವನ್ನು ಮಾಡಲಾಗಿದೆ.

**12. ಸ್ವದತ್ತಾಂ ಪರದತ್ತಾಂವಾ ಯೇಹರೇತ ವಸುಂಧರಾಂ ಷಷ್ಠಿವರ್ಷ ಸಹಸ್ರಾಣಿ ವಿಷ್ಠಾ ಯಾಂಜಾಯತೇ ಕ್ರಿಮಿಃ.**

ದಾನವನ್ನು ನಾಶಪಡಿಸುವ ಅಥವಾ ಅಪಹರಿಸುವಂತ ಪಾಪದ ಕಾರ್ಯ ಮಾಡುವವರು ಮುಂದಿನ ಜನ್ಮದಲ್ಲಿ ಕ್ರಿಮಿಕೀಟಗಳಂತಹ ಅತ್ಯಂತ ನಿಕೃಷ್ಟವಾದ, ಕೀಳಾದ ಜನ್ಮ ಫಲವನ್ನು ಪಡೆದು ಹೇಯವಾದ ಜೀವನವನ್ನು ನಡೆಸುತ್ತಾರೆ[10] ಎಂಬುದನ್ನು ತಿಳಿಸಿಕೊಡುವ ಮೂಲಕ ದಾನವನ್ನು ರಕ್ಷಿಸುವ ಪ್ರಯತ್ನ ಈ ಶಾಪಾಶಯದಲ್ಲಿದೆ.

**ರಾಜನ ಕರ್ತವ್ಯ ಪಾಲನಾಶಯ:**

**'ರಾಜಾಃ ಪ್ರತ್ಯಕ್ಷ ದೇವತಾಃ'** ರಾಜನು ಕಣ್ಣಿಗೆ ಕಾಣುವ ದೇವರು, ಇಂಥ ದೇವರಿಗೆ ಪ್ರಜೆಗಳು ದ್ರೋಹ ಮಾಡಿದರೆ ಅದಕ್ಕಿಂತಲೂ ಘೋರವಾದ ಪಾಪ ಮತ್ತೊಂದಿಲ್ಲ ಎಂಬ ನಂಬಿಕೆ ಸಮಾಜದಲ್ಲಿದ್ದಂತೆ, ರಾಜನೂ ಸಹಾ ಪ್ರಜೆಗಳ ಕ್ಷೇಮ ಪಾಲಕನಾಗಿರಬೇಕು, ಅವನೆಂದಿಗೂ ಪ್ರಜಾಪೀಡಕನಾಗಿರಬಾರದು ಎಂಬುದು ಅಂದಿನ ಸಮಾಜದ ನಂಬಿಕೆಯಾಗಿತ್ತು. ಅದಕ್ಕೆ ಯಥಾ ರಾಜಾ ತಥಾ ಪ್ರಜಾ ಎಂಬ ಮಾತು ಅಂದಿಗೂ ಇಂದಿಗೂ ಪ್ರಸ್ತುತವಾಗಿದೆ. ಚಿತ್ರದುರ್ಗ ಪಾಳೆಯಗಾರರ ಶಾಸನವೊಂದರಲ್ಲಿ ನೀಡಿದ ದಾನದ ರಕ್ಷಣೆಯಲ್ಲಿ ರಾಜನಾದವನ ಕರ್ತವ್ಯ ಪ್ರಜ್ಞೆಯನ್ನು ಮನನ ಮಾಡಿಸುವ ಕರ್ತವ್ಯ ಪಾಲನಾಶಯವೊಂದು

ದಾಖಲಾಗಿದೆ. ಅದೆಂದರೆ ***ಯೀ ಶಾಸನವನ್ನು ಯಾವ ದೊರ್ರಿಗಳು ವೋದಿಸಿದರ್ರು ಪತ್ತಿಪಾಲಿಸಿದರ್ರು ಪುನಹಾ ದೇವಸ್ತಾನದಲ್ಲಿ ಮಡಗಿಸುವುದು ಶ್ರೀ.*** ಈ ಕರ್ತವ್ಯ ಪಾಲನಾಶಯವನ್ನು ದಾಖಲಿಸಿರುವ ಶಾಸನ ಚಿತ್ರದುರ್ಗ ಜಿಲ್ಲೆಯ ಹೊಳ್ಕೆರೆಯ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿದ್ದ ತಾಮ್ರ ಶಾನವಾಗಿದೆ. ಇದು ನ್ಯಾಯ ತೀರ್ಮಾನ ಮಾಡಲು ಮುಖ್ಯವಾಗಿರುವ ಶಾಸನವಾಗಿರಬೇಕು. ಅದನ್ನು ನ್ಯಾಯ ನಿರ್ಣಯದ ಕಾರ್ಯಕ್ಕೆ ಪದೇ ಪದೇ ತೆಗೆದುಕೊಂಡು ಹೋಗಿ ಅದೇ ದೇವಾಲಯದಲ್ಲಿ ತಂದಿಡುತ್ತಿರುವ ಪದ್ಧತಿ ಇತ್ತು ಎಂದು ಕಾಣುತ್ತದೆ ಆದ್ದರಿಂದ ಯಾವ ರಾಜನೇ ಅಧಿಕಾರಕ್ಕೆ ಬರಲಿ ಮತ್ತು ಅದನ್ನು ನ್ಯಾಯನಿರ್ಣಯದಲ್ಲಿ ಬಳಸಿಕೊಳ್ಳಲಿ, ಅದರ ಉಪಯೋಗ ಮುಗಿದ ತಕ್ಷಣ ಅದನ್ನು ಪುನಃ ಅದೇ ದೇವಾಲಯದ ಮೂಲ ಸ್ಥಾನಕ್ಕೆ ತಂದಿಡಬೇಕೆಂಬ ಆಶಯವನ್ನು ಈ ಕರ್ತವ್ಯ ಪಾಲನಾಶಯದಲ್ಲಿ ಕಾಣಬಹುದು. ಇದರ ಹಿಂದೆ ಮತ್ತೊಂದು ಕಾರಣವೂ ಇರಬಹುದು, ರಾಜನಿಗೆ ಸಿಂಹಾಸನಾಧಿಕಾರ ಶಾಶ್ವತವಲ್ಲ. ಹೊಸದಾಗಿ ಅಧಿಕಾರಕ್ಕೆ ಬಂದ ರಾಜನು ಅವನಿಗಿಂತ ಮೊದಲು ಅಧಿಕಾರ ನಡೆಸಿದ್ದ ರಾಜನು ನೀಡಿದ್ದ ದಾನವನ್ನು ಅಳಿಸಿ ತನ್ನ ದಾನವನ್ನು ಮಾತ್ರ ಉಳಿಸಿಕೊಳ್ಳುವ ಪ್ರಯತ್ನಗಳೂ ಇದ್ದವು ಆದ್ದರಿಂದ, ದಾನವನ್ನು ಅಥವಾ ಶಾಸನವನ್ನು ನಾಶಪಡಿಸದಿರಲು ರಾಜನಿಗೆ ನೀಡಿದ್ದ ಧಾರ್ಮಿಕ ಆಜ್ಞೆಯಂತೆ ಕರ್ತವ್ಯ ಪಾಲನಾಶಯ ಕಂಡುಬರುತ್ತದೆ.

ಒಟ್ಟಾರೆಯಾಗಿ, ಚಿತ್ರದುರ್ಗ ಪಾಳೆಯಗಾರರ ಶಾಸನಗಳಲ್ಲಿ ಹದಿನೈದು ರೀತಿಯ ಫಲಶೃತಿಗಳು ಕಂಡುಬರುತ್ತವೆ. ಅವುಗಳಲ್ಲಿ, ಪುಣ್ಯಾಶಯಗಳಿಗಿಂತ ಶಾಪಾಶಯಗಳ ಸಂಖ್ಯೆ ಹೆಚ್ಚು. ಈ ರೀತಿಯ ಒರಟಾದ ಮತ್ತು ಅಶ್ಲೀಲವಾದ ಭಾಷೆಯ ಬಳಕೆಯ ಹಿಂದೆ ಹೇಗಾದರೂ ಸರಿಯೇ ಶಾಸನಗಳನ್ನು ಅಥವಾ ದಾನಗಳನ್ನು ರಕ್ಷಿಸಿಕೊಳ್ಳಬೇಕು ಎಂಬ ಘನೋದ್ದೇಶ ಮುಖ್ಯವಾಗಿರುವುದು ಕಂಡುಬರುತ್ತದೆ. ಈ ಒರಟು ಮತ್ತು ಅಶ್ಲೀಲ ಹೇಳಿಕೆಗಳು ಪ್ರಾಚೀನ ಕಾಲದಿಂದ ವಿಜಯನಗರ ಹಾಗೂ ಅವರ ಅಮರನಾಯಕರಾಗಿದ್ದ ಚಿತ್ರದುರ್ಗ ಪಾಳೆಯಗಾರರ ಕಾಲದವರೆಗಿನ ಶಾಸನಗಳವರೆಗೂ ಬೆಳೆದು ಬಂದಿವೆ. ಇಷ್ಟು ದೀರ್ಘಕಾಲದವರೆಗೂ ಅಶ್ಲೀಲ ಪದ ಪ್ರಯೋಗವಾಗಿರುವುದನ್ನು ಅವಲೋಕಿಸಿದರೆ, ದಾನವನ್ನು ಅಪಹರಿಸುವವರ ಸಂಖ್ಯೆ ಹೆಚ್ಚಿತ್ತು ಎಂಬುದು ಮನನವಾಗುತ್ತದೆ.

ಚಿತ್ರದುರ್ಗ ಪಾಳೆಯಗಾರರು ತಮ್ಮ ಶಾಸನಗಳಲ್ಲಿನ ಫಲಶೃತಿಗಳ ಮೂಲಕ ತಮ್ಮ ಸಮಕಾಲೀನ ಸಮಾಜದಲ್ಲಿನ ಮಾನವ ಸಂಬಂಧಗಳನ್ನು ಮಾನವೀಯ ಸಂಬಂಧಗಳನ್ನಾಗಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅಕ್ಷರ ಬಲ್ಲವರಿಗೆ ಅಕ್ಷರ ರೂಪದ ಫಲಶೃತಿಗಳಿದ್ದರೆ, ಅಕ್ಷರ ಬಲ್ಲದವರಿಗೆ ಫಲಶೃತಿಯ ವಿವರವನ್ನು ಶಾಸನದ ಕೊನೆಯ ಭಾಗದಲ್ಲಿ ಚಿತ್ರಮಯವಾಗಿ ಶಿಲ್ಪದಲ್ಲಿ ಕಂಡರಿಸಿರುವುದನ್ನು ಕಾಣಬಹುದು. ನನ್ನ ಕ್ಷೇತ್ರಕಾರ್ಯದಲ್ಲಿ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನ ಕಸವನಹಳ್ಳಿಯ ಇವರ ಕಾಲದ ಶಾಸನದಲ್ಲಿ **ಕತ್ತೆಯ ಮರ್ಮಾಂಗ ಕಲ್ಲುಪ್ಪನ್ನು ತಿನ್ನುವ** ವಿವರವನ್ನೊಳಗೊಂಡ ಶಿಲ್ಪವನ್ನು ಗುರುತಿಸಿದ್ದೇನೆ.

**ಕೊನೆಟಿಪ್ಪಣಿಗಳು**

1. ಗಂಗಾನಾಯಕ್, ಎ.ಎನ್. (2012). ಪಾಳೆಯಗಾರರ ಶಾಸನಗಳು. ಸಂ–1, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಮೈಸೂರು ವಿಶ್ವವಿದ್ಯಾನಿಲಯ. ಪು.v.
2. ಅದೇ, ಶಾಸನಸೂಚಿ ವಿಭಾಗ.
3. ರಾಜಣ್ಣ, ಡಿ.ಟಿ. (2010). ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಶಾಪ, ಭಂಡಾರ ಪ್ರಕಾಶನ, ಪು. 27.
4. ಅದೇ, ಪು. 27.
5. ಅದೇ, ಪು. 198.
6. ಅದೇ, ಪು. 170–173.
7. ಅದೇ, ಪು. 33.
8. ಅದೇ, ಪು. 180.
9. ಅದೇ, ಪು. 180.
10. ಅದೇ, ಪು. 173.